

**ಹೆಂಡತಿ:** ರೀ... ಮುಂಬರುವ ವರಮಹಾಲಕ್ಷ್ಮಿ ಹಬ್ಬಕ್ಕೆ ಹೆಣ್ಣು ಮಕ್ಕಳಿಗೆ ಅರಿಶಿನ ಕುಂಕುಮದ ಜೊತೆಗೆ ಇನ್ನೇನು ಕೊಡಲಿ?

**ಗುಂಡ:** ನನ್ನ ಫೋನ್ ನಂಬರ್ ಕೊಡು.

***

**ಮಗ:** ಅಮ್ಮ ನಂಗೆ ಈ ಅಂಗಡಿಯಲ್ಲಿ ಪಟಾಕಿ ಕೊಡಿಸು.

**ಅಮ್ಮ:** ಅಯ್ಯೋ ಕರ್ಮ, ಇದು ಪಟಾಕಿ ಅಂಗಡಿ ಅಲ್ಲ. ಲೇಡೀಸ್ ಹಾಸ್ಟೆಲ್!

**ಮಗ:** ಮತ್ತೆ ಅಪ್ಪ ನೆನ್ನೆ ಅವರ ಫ್ರೆಂಡ್ ಹತ್ರ ಹೇಳ್ತಿದ್ರು, ಇಲ್ಲಿ ಮಸ್ತ್ ಮಸ್ತ್ ಪಟಾಕಿಗಳಿವೆ ಅಂತ?

***

**ಹೆಂಡತಿ:** ರೀ... ಪಕ್ಕದ ಮನೆಯವರು ಹೇಳಿದ್ರು ನೆನ್ನೆ ನಮ್ಮ ಮನೆ ಗೇಟ್ ಹತ್ರ ದೆವ್ವ ನೋಡಿದ್ರಂತೆ.

**ಗಂಡ:** ಅಲ್ವೇ, ಎಷ್ಟು ಸಾರಿ ಹೇಳಿದ್ದೇನೆ. ಮೇಕಪ್ ಮಾಡದೇ ಗೇಟ್ ಹತ್ರ ಹೋಗಬೇಡ ಅಂತ. ನನ್ನ ಮಾತು ಕೇಳೋದೆ ಇಲ್ವಲ್ಲಾ?

***

**ಸೀನ:** ಯಾವ ಪ್ರಶ್ನೆ ಕೇಳಿದರೂ ನಾನು ಉತ್ತರ ಹೇಳುತ್ತೇನೆ.

**ಸುಬ್ಬ:** ಆಕಾಶದಲ್ಲಿ ಎಷ್ಟು ನಕ್ಷತ್ರಗಳಿವೆ ಹೇಳು ನೋಡೋಣ?

**ಸೀನ:** 23145678657643. ಡೌಟಿದ್ದರೆ ಎಣಿಸಿ ನೋಡು.

***

**ಹೆಂಡತಿ:** ನೆನ್ನೆ ನಾವಿಬ್ಬರೂ ಮಾರ್ಕೆಟ್‌ನಲ್ಲಿ ಜೊತೆಯಾಗಿ ಹೋಗುತ್ತಿದ್ದಾಗ ನಮ್ಮನ್ನು ದುರುಗುಟ್ಟಿಕೊಂಡು ನೋಡುತ್ತಾ ಇದ್ದಳಲ್ಲ ಅವಳ್ಯಾರು?

**ಗಂಡ:** ಸ್ವಲ್ಪ ಸುಮ್ಮನಿರೇ, ಇದೇ ಪ್ರಶ್ನೆ ಅವಳು ಕೇಳಿದ್ರೆ ಏನು ಹೇಳಲಿ ಅಂತ ನಾನು ತಲೆಬಿಸಿ ಮಾಡಿಕೊಂಡಿದ್ದೇನೆ.

***

**ಸ್ಮಿತಾ:** ನಿಮ್ಮ ಅತ್ತೆ ಎಲ್ಲಾ ವಿಷಯಕ್ಕೂ ತುಂಬಾ ಕಿರಿಕಿರಿ ಮಾಡ್ತಾರೆ ಅಂತಿದ್ದಲ್ಲ, ಈಗಲೂ ಹಾಗೇನಾ?

**ನೀತಾ:** ಈಗ ಎಲ್ಲಾ ಸರಿಹೋಗಿದೆ. ನಮ್ಮತ್ತೆ ನನ್ನ ತಲೆ ಎತ್ತಿ ಕೂಡ ನೋಡದ ಹಾಗೆ ಮಾಡಿಬಿಟ್ಟೆ.

**ಸ್ಮಿತಾ:** ಹೌದಾ, ಏನು ಮಾಡಿದೆ?

**ನೀತಾ:** ಒಂದು ಮೊಬೈಲ್ ಕೊಡಿಸಿ, ಫೇಸ್‌ಬುಕ್, ವಾಟ್ಸ್ಆ್ಯಪ್ ಬಳಸೋದು ಹೇಳಿಕೊಟ್ಟೆ. ಈಗ ಬೆಳಿಗ್ಗೆಯಿಂದ ರಾತ್ರಿ ತನಕ ಮೊಬೈಲ್‌ನಲ್ಲೇ ಮುಳುಗಿ, ಯಾರ ಕಡೆಗೂ ತಲೆ ಎತ್ತಿ ನೋಡೋದೂ ಇಲ್ಲ.

***

**ಹೆಂಡ್ತಿ:** ನಿಮ್ಗೆ ಹೆಂಡತಿ ಮುಖ್ಯಾನಾ ಅಥವಾ ತಂಗಿ ಮುಖ್ಯಾನಾ?

**ಗಂಡ:** ಇಬ್ಬರೂ ಅಲ್ಲ. ನನಗೆ ನಿನ್ನ ತಂಗಿ ಮುಖ್ಯ.




***

**ತಿಮ್ಮ:** ಸಾವನ್ನು ಸಮೀಪಿಸುತ್ತಿರುವ ವ್ಯಕ್ತಿಯ ನಿಜವಾದ ಸ್ನೇಹಿತ ಯಾರು?

**ಗುಂಡ:** ಸಾಯುತ್ತಿರುವವನ ಮೊಬೈಲ್ ಅನ್ನು ಫಾರ್ಮ್ಯಾಟ್ ಮಾಡಿ ಅವನ ಮಾನ ಕಾಪಾಡುವವನು.

***

**ಟೀಚರ್:** ಒಂದರಿಂದ ಹತ್ತರವರೆಗೆ ಹೇಳು ಗುಂಡ.

**ಗುಂಡ:** 1, 2, 4, 5, 6, 7, 8, 9, 10 ಆಯ್ತು ಟೀಚರ್!

**ಟೀಚರ್:** 3 ಯಾಕೆ ಬಿಟ್ಟೆ? ಅದನ್ನು ಹೇಳಲೇ ಇಲ್ಲವಲ್ಲ.

**ಗುಂಡ:** ಮೂರು ಸತ್ತು ಹೋಗಿದೆ, ಅದಕ್ಕೆ ಹೇಳಲಿಲ್ಲ.

**ಟೀಚರ್:** ಯಾರು ಹೇಳಿದ್ದು?

**ಗುಂಡ:** ನೆನ್ನೆ ಪೇಪರ್‌ನಲ್ಲಿ ಬಂದಿತ್ತು, ರಸ್ತೆ ಅಪಘಾತದಲ್ಲಿ ಮೂರು ಸಾವು.

***

**ಗುರುಗಳು:** ನೆನ್ನೆ ಹೇಳಿಕೊಟ್ಟ ಶ್ಲೋಕ ಹೇಳು.

**ಶಿಷ್ಯ:** ತುಮ್ ಸೋಜಾ ಮಾ ಮೈ ಜ್ಯೋತಿ ಕೇ ಘರ್ ಜಾ ರಹಾ ಹೂಂ.

**ಗುರುಗಳು:** ಅಯ್ಯೊ ಮಂಗ ಅದು 'ತಮಸೋಮ ಜ್ಯೋತಿರ್ಗಮಯ' ಕಣೋ.

***

**ಅಮ್ಮ:** ನಾನು ನಿನಗೆ ಕೇವಲ ಎರಡು ಚಾಕೊಲೇಟ್ ಮಾತ್ರ ಕೊಳ್ಳಲು ಹೇಳಿದ್ದೆ. ಆದರೆ ನೀನು ಹತ್ತು ಚಾಕೊಲೇಟ್‌ಗಳನ್ನು ಏಕೆ ಕೊಂಡಿರುವೆ?

**ಪಿಂಕಿ:** ನನ್ನ ಹೋಂ ವರ್ಕ್ ಮಾಡಿಸಿಕೊಳ್ಳಲು ಅಣ್ಣನಿಗೆ ಲಂಚ ಕೊಡಬೇಕಲ್ಲ ಅದಕ್ಕೆ.

–ಶರದ ಕುಲಕರ್ಣಿ, ಬೀದರ್

